ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀನಿವಾಸ ಶೆಟ್ಟಿ ಸಾಹಿತ್ಯದ ನಿತ್ಯವಿದ್ಯಾರ್ಥಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆದವರು. ಕಥೆ, ಕಾದಂಬರಿ, ವೈಚಾರಿಕ ಲೇಖನಗಳ ಓದಿನ ಜೊತೆಗೆ ಅಂಬೇಡ್ಕರ್ ಬರಹಗಳನ್ನು ಹೆಚ್ಚು ಪ್ರೀತಿಸುವವರು. ದೇವನೂರು ಮಹಾದೇವ ಅವರ ಗನ್‌ಮ್ಯಾನ್ ಆಗಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದಾರೆ. ಹುಣಸೂರು ಬಳಿಯ ವೀರನ ಹೊಸಹಳ್ಳಿ ಅವರ ಹುಟ್ಟೂರು. ವೀವೆಂಶ್ರೀ ಎಂಬ ಕಾವ್ಯನಾಮದಲ್ಲಿ ಕವಿತೆ ಬರೆಯುತ್ತಾರೆ.

ಪದಾರ್ಥ ಬಿಟ್ಟಿಡ್ತೀರಾ. ಈ ಸ್ಪಿರಿಟ್ ಇದೆಯಲ್ಲಾ... ಹಾss, ಸಾರಾಯ್ ಮಾಡಕೆ ಕಾಯಿಸ್ತಾರಲ್ಲ, ಅಲ್ಲಿ ಕಚಡಾ ಎಲ್ಲಾ ಬಿದ್ದಿರುತ್ತೆ... ಎಕ್ಕಡದ ಚೂರು ಆಕ್ತಾರ್ರಿ... ಏನ್ ಬೆಚ್ತಾ ಇದ್ದೀರಲ್ಲ? ಕಾಯ್ಸಿದ್ದನ್ನ ಬಟ್ಟಿ ಇಳ್ಸಿ ಆವಿಯಾಗಿ ಒಂದ್ ಒಂದ್ ಹನಿಯಾಗಿ ಬೀಳುತ್ತಲ್ಲ, ಅದು ಸ್ಪಿರಿಟ್. ಇದನ್ನ ಅರಿವು ಬರಿಸ್ಕೊಳ್ಳೋದೆ ಮೊದಲನೇ ಸ್ಟೆಪ್. ಆಮೇಲೆ ಹುಡುಕಾಟ' – ಹೀಗೆ ಒಂದೊಂದು ದಿನ ನನಗೆ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣದಲ್ಲಿರುವೆನೇನೋ ಅನ್ನಿಸುವಷ್ಟು ವಿಚಾರಗಳು ಹರಿದುಬರುತ್ತವೆ, ಈಗಲೂ.

ಒಂದ್ ಬೆಳಿಗ್ಗೆ ಮಲ್ಲೇಪುರಂ ವೆಂಕಟೇಶ್ ಸರ್, ದೇಮ ಅವರ ಕುಶಲೋಪರಿ ವಿಚಾರಿಸೋಕೆ ಬಂದಿದ್ರು. ಪ್ರತಿಯೊಬ್ಬರಿಗೂ ಪರಿಚಯಿಸುವಂತೆ ಇವರಿಗೂ ನನ್ನ ಪರಿಚಯ ಮಾಡಿದ್ರು. ಮಾತುಕತೆ ಎಲ್ಲಾ ಮುಗ್ದು ಹೊರಗೆ ಬಂದವರೇ 'ಅವಧೂತನೊಂದಿಗೆ ಮುಂಜಾವು' ಎಂದು ಆ ಮುಂಜಾವಿಗೆ ಹೆಸರಿಟ್ಟು ಮಲ್ಲೇಪುರಂ ಹೊರಟು. "ಏನ್ ಸರ್, ಏನೋ ದರ್ಶನ ಕೊಟ್ಟಿದ್ದೀರಾ... ಆ ಅವತಾರನ ನಂಗೂ ದರ್ಶನ ಮಾಡ್ಸಿ ಸರ್" ಅಂದೆ. "ರೀ ಅವ್ರು ಅಂದ್ರು ಅಂತ ನಾವ್ ಅಂದ್ಕಳಕ್ ಆಗುತ್ತಾ. ಯಾರ್‍ಯಾರ ಭಾವಕ್ಕೆ, ಸ್ಪಂದನೆಗೆ ಸಿಕ್ಕಂತೆ ನಾವು ಅಂದ್ಕಬುಟ್ರೆ, ನಾವು ಅದೇ ರೀತಿ ಪ್ರಾಜೆಕ್ಟ್ ಮಾಡಿಕೊಳ್ಳೋಕೆ ನೋಡಿದ್ರೆ ದಿಕ್ ತಪ್ಪುತ್ತೆ... ಇಷ್ಟ್ ವರ್ಷ ನಾನು ಲೇಖಕ ಅಂತ ಬರ್ದಿದ್ರೆ ಉಳಿತಿತ್ತೇನ್ರೀ, ನಾನೇನೋ ಸಪರೇಟ್ ಅನ್ನೋತರ, ನಾನೇನೋ ಜೀನಿಯಸ್ ಅನ್ನೋತರ ಆದ್ರೆ ಅದು ಪಾಪ."

ಮನ್ಸಲ್ಲೇ ಏನಪಾ ಇದು ಅಂತ ನಂಗೂ ಅನ್ನಿಸ್ತು.

ಇವ್ರನ್ನ ಇಂಟರ್‌ವ್ಯೂ ಮಾಡ್ತಾರಲ್ಲ, ಹಾಗೇ ನಾನು ಏನಾದ್ರು ಒಂದ್ ಕೇಳ್ಬೇಕಲ್ಲ... ಇವ್ನು ಪರವಾಗಿಲ್ಲ ತಿಳ್ಕಂಡವ್ನೆ ಅಂತ ಅನ್ನಿಸ್ಕೊಬೇಕು ಅನ್ನೋ ಹಪಹಪಿಯಲ್ಲಿ ಬುದ್ಧಿ ಬಳ್ಸಿ ಒಂದ್ ಪ್ರಶ್ನೆ ಕೇಳ್ದೆ – 'ಸರ್, ಗಾಂಧಿಯನ್ನೇ ಗಾಂಧಿಯ ತತ್ವಗಳ ಮೂಲಕ ಎದುರಾದರೆ ಅವರಲ್ಲಿ ಯಾವ ರಿಯಾಕ್ಷನ್ ಇರುತ್ತೆ ಸರ್' ಅಂದೆ.

'ಗಾಂಧಿ ಒಟ್ಟಿಗೆ ಬಾಳಿ, ಕ್ಲೋಸ್ ಇರ್ತಾರಲ್ಲಾ, ಅವ್ರನ್ನ ಕೇಳ್ಬೇಕು, ಇಲ್ಲ ಗಾಂಧಿನೇ ಕೇಳ್ಬೇಕು ಈ ಪ್ರಶ್ನೆ. ನಿಮ್ಗೆ ಗಾಂಧಿ, ತತ್ವ ಅಂತ ಪದಗಳಲ್ಲೇ ಡಿಕ್ಕಿ ಹೊಡಿತಿದ್ದೀರಲ್ಲ... ಗಾಂಧಿ ತತ್ವ ಅಂದ್ರೆ ಏನೋ ಅಂದ್ಕಂಬುಟ್ಟಿದ್ದೀರಾ... ಗಾಂಧಿ ನಡೆ ಮೂಲಕ, ಸ್ಪಂದನದ ಮುಖಾಂತರ, ಬಿಹೇವಿಯರ್ ಮುಖಾಂತರ ಅದೆಲ್ಲವನ್ನೂ ಕ್ರೋಡೀಕರಿಸಿ ನೀತಿಗಳನ್ನ ಹೇಳೋದು... ಅಷ್ಟೇ ನಂಗೂ ಗೊತ್ತಿರೋದು' ಅಂದ್ರು, ಏನೂ ಗೊತ್ತಿಲ್ಲ ಅನ್ನೋ ರೀತಿ.

'ಸರ್, ತೇಜಸ್ವಿ ಅವ್ರುದು ಪ್ರಜಾವಾಣಿಲಿ ಇವತ್ ಒಂದ್ ಕೋಟೇಷನ್ ಬಂದಿತ್ತು – 'ನಮ್ಮ ಮಾತುಗಳಿಗೆ ಬೆಲೆ ಬರ್ಬೇಕು ಅಂದ್ರೆ ನಮ್ ನಡವಳಿಕೆಯೂ ಹಾಗೇ ಇರಬೇಕು' ಅಂತ. ಆ ಬೇಸ್ ಮೇಲೆ ಕೇಳ್ದೆ ಸರ್' ಅಂದೆ.

ನನ್ನನ್ನ ಶತದಡ್ಡ ಇಲ್ಲ ಅತಿ ಬುದ್ಧಿವಂತ ಅಂತನೋ ಸ್ವಲ್ಪ ಹೊತ್ತು ಹಂಗೇ ಇದ್ದು, 'ಈಗ ಮಾರ್ಕ್ಸ್ ವಾದ, ಅವ್ರು ಆ ರೀತಿ ಬದ್ಕುದ್ರೋ ಇಲ್ವೋ ಗೊತ್ತಿಲ್ಲ. ಆದ್ರೆ ಆ ವಾದ ಜಗತ್ತು ಆಳ್ತಲ್ರಿ... ಯಾವುದು ಬೇಕು ಬೇಡ ಅನ್ನೋದು ಸ್ವಭಾವ, ಆದರೆ ಎಲ್ಲರದ್ದೂ ಒಂದೊಂದ್ ರೀತಿ ಕಾಂಟ್ರಿಬ್ಯೂಷನ್ ಇರುತ್ತೆ ಅಲ್ವಾ?' – ಕೆಲವು ಸಿದ್ಧಾಂತಗಳ ತಳವನ್ನು ದೇಮ ದರ್ಶಿಸುವುದು ಹೀಗೆ.

ಈಗ್ಲೂ ಸಾಹಿತ್ಯವಲ್ಲದೆ ಧರ್ಮ, ರಾಜಕೀಯ, ಕೃಷಿಯ ಸೂಕ್ಷ್ಮ ವಿಚಾರಗಳ ಬಗೆಗೆ ಹೇಳ್ಕೊಡ್ತಾರೆ. 'ನಿಮ್ ಧರ್ಮ ಯಾವ್ದು ಅಂತ ಒಂದ್ಸಲ 'ಸುಧಾ'ದಲ್ಲಿ ಕೇಳಿದ್ರು. ಅದ್ಕೆ ನಾನೇನ್ ಹೇಳಿಬೋ್ಲದು ರೀ' ಎಂದು ನನ್ನನ್ನ ಕೇಳಿದ್ರು. ನಾನ್ ಸುಮ್ಮಿದ್ದದ ನೋಡಿ ಅವ್ರೇ ಹೇಳಿದ್ರು – 'ಬೌದ್ಧ ಮತ್ತೆ ಲಿಂಗಾಯತ